

## ಮರಳಿದ ಕಿಂಗ್ಸ್‌ಮ್ಯಾನ್

ಹಾಲಿವುಡ್‌ನಲ್ಲೂ ಈ ವಾರ ಆ್ಯಕ್ಷನ್ ಚಿತ್ರವೊಂದರ ಎರಡನೇ ಅವತಾರ ಮರಳಿ ಬಂದಿದೆ. 'ಕಿಂಗ್ಸ್‌ಮ್ಯಾನ್' ಸರಣಿಯ 'ದಿ ಗೋಲ್ಡನ್ ಸರ್ಕಲ್' ಇದೀಗ ತೆರೆಗೆ ಸಿದ್ಧವಾಗಿದೆ. ಕಾಲಿನ್ ಫರ್ತ್ ಅದ್ಭುತ ಆ್ಯಕ್ಷನ್‌ನ ಈ ಚಿತ್ರದಲ್ಲಿ ಟ್ಯಾರನ್ ಇಗರ್ಟನ್ ಮತ್ತು ಜೂಲಿಯನ್ ಮೂರ್ ಪ್ರಮುಖ ಪಾತ್ರದಲ್ಲಿದ್ದಾರೆ. ಟ್ವಂಟಿಯತ್ ಸೆಂಚುರಿ ಫಾಕ್ಸ್ ನಿರ್ಮಾಣದ ಚಿತ್ರದ ಪ್ರೀಮಿಯರ್ ಶೋ ನ್ಯೂಯಾರ್ಕ್‌ನಲ್ಲಿ ನಡೆಯಬೇಕಿತ್ತು. ಆದರೆ ಅದೇ ವೇಳೆ ಅಮೆರಿಕವನ್ನು ನಡುಗಿಸಿದ ಹಾರ್ವೆ ಚಂಡಮಾರುತದ ಸಲುವಾಗಿ ಶೋ ಅನ್ನು ರದ್ದು ಮಾಡಲಾಯಿತು. ಶೋ ಗೆ ಖರ್ಚಾಗಲಿದ್ದ ಹಣವನ್ನು ಚಂಡಮಾರುತದ ಸಂತ್ರಸ್ತರಿಗೆ ನೀಡಲಾಯಿತು. ನಟಿ ಜೂಲಿಯನ್ ಮೂರ್ ಚಿತ್ರದಲ್ಲಿ ವಿಭಿನ್ನ ಗೆಟಪ್‌ಗಳಲ್ಲಿ ಅದ್ಭುತ ಅಭಿನಯ ನೀಡಿದ್ದಾರೆ ಎನ್ನುವುದು ವಿಮರ್ಶಕರ ಮಾತು.

## ಮತ್ತೆ ಆಂಖೇಂ

ಯಶಸ್ಸು ಹೊಂದಿದ ಸಿನಿಮಾಗಳನ್ನು ಭಾಗ–2 ಅಥವಾ 3 ಎಂದು ಮುಂದುವರಿಸುವುದು ಇತ್ತೀಚೆಗೆ ಟ್ರೆಂಡ್ ಆಗಿದೆ. ಬೇರೆ ಸ್ವತಂತ್ರ ಕಥೆಗಳಿಲ್ಲ ಎನ್ನುವುದಕ್ಕಿಂತ, ಲಾಭದತ್ತ ಕಣ್ಣು ನೆಟ್ಟೇ ನಿರ್ಮಾಪಕರು ಇಂತಹ ಚಿತ್ರಗಳಿಗೆ ಹಣ ಹೂಡುವುದುಂಟು. ಅಮಿತಾಭ್ ಬಚ್ಚನ್ ಅಭಿನಯದ 'ಆಂಖೇಂ' 2002ರಲ್ಲಿ ಅತ್ಯಂತ ಯಶಸ್ಸು ಕಂಡ ಚಿತ್ರ. ಮೂವರು ಅಂಧರು ಬುದ್ಧಿವಂತಿಕೆಯಿಂದ ಬ್ಯಾಂಕ್ ಒಂದನ್ನು ದರೋಡೆ ಮಾಡುವ ಕಥೆ. ಹೀರೋ ಆಗಿದ್ದ ಅಮಿತಾಭ್ ವೈವಿಧ್ಯಮಯ ಪಾತ್ರಗಳಿಗೆ ಹೊರಳಿಕೊಳ್ಳುತ್ತಾ, ವಿಲ್ಲನ್ ಆಗಿ ನಟಿಸಿದ ಚಿತ್ರವದು. ಈಗ 'ಆಂಖೇಂ 2' ಸಿದ್ಧವಾಗಿದೆ. ಮೊದಲ ಚಿತ್ರವನ್ನು ವಿಪುಲ್ ಷಾ ನಿರ್ದೇಶಿಸಿದ್ದರೆ, ಈಗ ಎರಡನೇ ಭಾಗವನ್ನು ಅನೀಸ್ ಬಾಜ್ಮಿ ನಿರ್ದೇಶಿಸಿದ್ದಾರೆ. ಅಮಿತಾಭ್ ಜತೆಗೆ ಅರ್ಶದ್ ವಾರ್ಸಿ, ಅನಿಲ್ ಕಪೂರ್, ಅರ್ಜುನ್ ರಾಂಫಾಲ್ ಪಾತ್ರಗಳನ್ನು ನಿರ್ವಹಿಸಲಿದ್ದಾರೆ. ಚಿತ್ರದ ಶೂಟಿಂಗ್ ಆಫ್ರಿಕಾದ ಕೇಪ್‌ಟೌನ್‌ನ ಕ್ಯಾಸಿನೋ ಒಂದರಲ್ಲಿ ನಡೆದಿದೆಯಂತೆ.





## ಜುಡ್ವಾ ಜೋಡಿ

'ಜುಡ್ವಾ 2' ಚಿತ್ರದ್ದೂ ಇದೇ ಕಥೆ. 1997ರಲ್ಲಿ ಸೂಪರ್‌ಹಿಟ್ ಆದ ಚಿತ್ರ ಜುಡ್ವಾ. ಇದೀಗ ಡೇವಿಡ್ ಧವನ್ ಅದೇ ಚಿತ್ರವನ್ನು ರಿಮೇಕ್ ಮಾಡಿದ್ದಾರೆ. ವರುಣ್ ಧವನ್ ನಾಯಕನಾಗಿ ನಟಿಸಿದ್ದರೆ, ತಾಪ್ಸೀ ಪನ್ನು ಮತ್ತು ಜಾಕ್ವೆಲಿನ್ ಜೋಡಿ ಹೀರೋಯಿನ್‌ಗಳು. 20 ವರ್ಷಗಳ ಬಳಿಕ ಜನಪ್ರಿಯ ಚಿತ್ರವೊಂದನ್ನು 'ರಿಮೇಕ್' ಮಾಡುವುದು ನಿಜಕ್ಕೂ ಕುತೂಹಲಕರ ಅನುಭವ ಎನ್ನುವುದು ಡೇವಿಡ್ ಧವನ್ ಮಾತು. ಆ ಕಾಲದ ಸಿನಿಮಾ ವೀಕ್ಷಕರ ಜಾಯಮಾನಕ್ಕೂ ಈಗಿನ ಪ್ರೇಕ್ಷಕರ ಜಾಯಮಾನಕ್ಕೂ ಇರುವ ವ್ಯತ್ಯಾಸವನ್ನು ಅರಿತುಕೊಂಡೇ ಈ ರಿಮೇಕ್ ಮಾಡಿದ್ದೇನೆ ಎನ್ನುತ್ತಾರೆ ಡೇವಿಡ್.

■ **ಬಿಂದು**